# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರ ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:**

ಖಾಸಗಿ ಅನುದಾನಿತ/ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ನವೀಕರಣವನ್ನು ಮಾಡುವ ಸಂದರ್ಭದಲ್ಲಿ ಅಗ್ನಿಶಾಮಕ ಇಲಾಖೆಯಿಂದ ಕಡ್ಡಾಯವಾಗಿ ಸಮಾಪನ ಪತ್ರ ಪಡೆದಿರಬೇಕೆಂಬ ಷರತ್ತು ವಿಧಿಸಲಾಗಿದೆ. ಸರ್ಕಾರಿ ಶಾಲೆಗಳಿಗೆ ಇಲ್ಲದ ನಿಯಮಗಳನ್ನು ಖಾಸಗಿ ಶಾಲೆಗಳ ಮೇಲೆ ಹೇರುತ್ತಿರುವುದು ಸಮಂಜಸವಲ್ಲ. ಅಗ್ನಿಶಾಮಕ ಇಲಾಖೆ ಈ ರೀತಿಯ ನಿಯಮಗಳಿಂದ ಖಾಸಗಿ ಶಾಲೆಗಳು ಲಕ್ಷಾಂತರ ರೂಗಳನ್ನು ಲಂಚ ನೀಡಿ ತಿಂಗಳುಗಟ್ಟಲೆ ಅಗ್ನಿಶಾಮಕ ಇಲಾಖೆಯ ಕಚೇರಿಗೆ ಅಲೆದಾಡುವ ಪರಿಸ್ಥಿತಿ ಬಂದಿದೆ. ಅಗ್ನಿಶಾಮಕ ಇಲಾಖೆಯವರು ಅಗ್ನಿಶಾಮಕ ಸಮಾಪನ ಪತ್ರವನ್ನು (ಫೈರ್ ಕಾಂಪ್ಲಯೆನ್ಸ್ ರಿಪೋರ್ಟ್) ನೀಡಲು ವಿಧಿಸಿರುವ ಷರತ್ತುಗಳನ್ನು ಖಾಸಗಿ ಶಾಲೆಗಳವರು ಪೂರೈಸಲು ಸಾದ್ಯವಾಗುತ್ತಿಲ್ಲ. ಪ್ರತಿ ವರ್ಷ ನವೀಕರಣ ಮಾಡಬೇಕೆಂದು ನಿಗದಿಗೊಳಿಸಿ ಒಂದು ವರ್ಷಕ್ಕೆ ಮಾತ್ರ ಸಮಾಪನ ಪತ್ರ ನೀಡಲಾಗುತ್ತಿದೆ. ಇದರಿಂದ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳವರು ಪ್ರತಿವರ್ಷ ಲಕ್ಷಾಂತರ ರೂಗಳ ಲಂಚವನ್ನು ಅಗ್ನಿಶಾಮಕ ಇಲಾಖೆಯವರಿಗೆ ನೀಡಬೇಕಾಗಿದೆ. ಆದ್ದರಿಂದ ಅಗ್ನಿಶಾಮಕ ಸಮಾಪನ ಪತ್ರ ಪಡೆಯಲು ವಿಧಿಸಿರುವ ಷರತ್ತುಗಳನ್ನು ಸಡಿಲಗೊಳಿಸಬೇಕು. ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಸುಸಜ್ಜಿತ ಶಾಲಾ ಕಟ್ಟಡಗಳಿಗೆ ಒಂದು ವರ್ಷಕ್ಕೆ ನೀಡುತ್ತಿರುವ ಸಮಾಪನ ಪತ್ರವನ್ನು 10 ವರ್ಷ 20 ವರ್ಷಗಳಿಗೊಮ್ಮೆ ಮಾಡಬೇಕು ಹಾಗೂ ವಿನಾ ಕಾರಣ ತೊಂದರೆ ನೀಡುತ್ತಿರುವ ಅಗ್ನಿಶಾಮಕ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕೆಂಬ ವಿಷಯವನ್ನು ನಿಯಮ 72ರಲ್ಲಿ ಮಾನ್ಯ ಗೃಹ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ:**

ಖಾಸಗಿ ಅನುದಾನ/ಅನದಾನರಹಿತ ಶಾಲೆಗಳೂ ಸೇರಿದಂತೆ, ಸರ್ಕಾರಿ ಶಾಲಾ ಕಾಲೇಜುಗಳಿಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಸಮಾಪನ ಪತ್ರ ಪಡೆಯುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ(ಸಿವಿಲ್) ಸಂಖ್ಯೆ:483/2004 ರ ದಿನಾಂಕ:13.04.2009 ರ ತೀರ್ಪಿನ ಕಂಡಿಕೆ 3.4 ರಲ್ಲಿ ಕಡ್ಡಾಯಗೊಳಿಸಿರುತ್ತದೆ. ಇದರನ್ವಯ ನಿಗಧಿತ ಕಾಲಮಿತಿಯಲ್ಲಿ ನೀಡಲಾಗುತ್ತಿರುತ್ತದೆ.

ಸಮಾಪನ ಪತ್ರ ಪಡೆಯಲು ಸದರಿ ಕಟ್ಟಡಗಳಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಮಾನದಂಡಗಳು ಅಳವಡಿಸಬೇಕಾಗಿರುವ ಉಪಕರಣಗಳ ಬಗ್ಗೆ ರಾಷ್ಟ್ರೀಯ ಕಟ್ಟಡ ಸಂಹಿತೆ ಅನುಚ್ಛೇದ 4.9(a), 4.9(c), 4.9(e), 5.1.1(a), 5.1.1(d), 5.1.2.1, 5.1.3(a) ರ ಸೂಚನೆಗಳನ್ನು ಅಗ್ನಿಶಮನ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಅಳವಡಿಸುವುದನ್ನು ಖಾತರಿಪಡಿಸಿಕೊಂಡು, ಅಳವಡಿಸಿದ್ದಲ್ಲಿ ಸಲಹಾ ಪತ್ರ / ಸಮಾಪನ ಪತ್ರಗಳನ್ನು ಇಲಾಖೆಯಿಂದ ನೀಡಲಾಗುತ್ತಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ(ಸಿವಿಲ್) ಸಂಖ್ಯೆ:483/2004 ರ ದಿನಾಂಕ:13.04.2009 ರ ತೀರ್ಪಿನ ಕಂಡಿಕೆ 3.4 ರಲ್ಲಿ ಕಡ್ಡಾಯಗೊಳಿಸಿರುವ ಸೂಚನೆಗಳನ್ವಯ ಸದರಿ ಕಟ್ಟಡಗಳಲ್ಲಿ ಅಳವಡಿಸಿರುವ ಅಗ್ನಿಶಮನ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಸುಸ್ಥಿತಿಯಲ್ಲಿ ಹಾಗೂ ಕಾರ್ಯ ಸನ್ನದ್ಧ ಸುಸ್ಥಿತಿಯಲ್ಲಿರುವುದನ್ನು ವರ್ಷಕ್ಕೊಮ್ಮೆ ಪರಿಶೀಲಿಸಿ, ಸಮಾಪನಾ ಪತ್ರವನ್ನು ವರ್ಷಕ್ಕೊಮ್ಮೆ ನವೀಕರಣಗೊಳಿಸಲು ಇಲಾಖೆಯು ಕ್ರಮ ಕೈಗೊಳ್ಳಲಾಗುತ್ತಿದೆ.

ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ 334 ಎಸ್‌ಎಫ್‌ಬಿ 2023, ದಿನಾಂಕ:30-03-2024 ಮತ್ತು 15.07.2024 ರ ಪ್ರಕಾರ ಆಯಾ ಸೇವೆಗಳಿಗೆ ನಿಗಧಿಪಡಿಸಿರುವ ಸರ್ಕಾರಿ ಶುಲ್ಕವನ್ನು ಪಾವತಿಸಿದ ನಂತರ ಇಲಾಖೆಯಿಂದ ಸಲಹಾ ಪ್ರಮಾಣ ಪತ್ರ / ಸಮಾಪನ ಪತ್ರಗಳನ್ನು ನೀಡಲಾಗುತ್ತಿದ್ದು, ಇದರ ಹೊರತಾಗಿ ಯಾವುದೇ ಹೆಚ್ಚುವರಿ ಮೊತ್ತಕ್ಕೆ ಬೇಡಿಕೆ ಇಟ್ಟಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು

ಸಂಖ್ಯೆ: ಹೆಚ್‌ಡಿ 135 ಎಸ್‌ಎಫ್‌ಬಿ 2024